ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತೊಂದನೆಯ ಅಧಿವೇಶನ
ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ವಿಕಾಸ ಸೌಧ, ವಿಧಾನ ಸೌಧ ಪ್ರವೇಶಕ್ಕಾಗಿ ಪಾಸ್ ವಿತರಿಸುವ ಕುರಿತು

ಶ್ರೀ ಎನ್. ರವಿಕುಮಾರ್(ವಿಧಾನ ಸಭೆಯಿಂದ ಚುನಾಯಿತರಾದವರು ) –

533 (652) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ವಾಹನಗಳಿಗೆ ವಿಧಾನ ಸೌಧ, ವಿಕಾಸ ಸೌಧ ಪ್ರವೇಶಿಸಲು ಅನುವಾಗುವಂತೆ ಎಷ್ಟು ವಿಧದ ಪಾಸುಗಳನ್ನು ನೀಡಲಾಗುತ್ತದೆ; ಅದಕ್ಕೆ ಇರುವ ನಿಯಮಗಳೇನು; (ನಿಯಮದ ಪ್ರತಿಯೊಂದಿಗೆ ವಿವರ ನೀಡುವುದು)

(ಆ) ವಾಹನಗಳಿಗೆ ವಿಧಾನ ಸೌಧ, ವಿಕಾಸ ಸೌಧ ಪ್ರವೇಶಿಸಲು ಅನುವಾಗುವಂತೆ ಪಾಸುಗಳನ್ನು ನೀಡಲು ಇರುವ ಮಾನದಂಡಗಳೇನು; ಯಾವ ಯಾವ ವ್ಯಕ್ತಿಗಳಿಗೆ ವಾಹನ ಪಾಸ್ ನೀಡಲಾಗುತ್ತದೆ;

(ಇ) 2020ರ ಜನವರಿ ತಿಂಗಳಿನಿಂದ ಇದುವರೆಗೆ ಎಷ್ಟು ವಾಹನಗಳಿಗೆ ವಾಹನ ಪಾಸ್ ವಿತರಿಸಲಾಗಿದೆ; ಸರ್ಕಾರಿ ಅಧಿಕಾರಿಗಳು ಸರ್ಕಾರದ ವಾಹನಗಳನ್ನು ಹೊರತುಪಡಿಸಿ ವಾಹನ ಪಾಸ್ ಪಡೆದ ಖಾಸಗಿ ವ್ಯಕ್ತಿಗಳ ಹೆಸರು, ವಾಹನದ ಸಂಖ್ಯೆಯೊಂದಿಗೆ ಮಾಹಿತಿ ನೀಡುವುದು;

(ಈ) ಗಣ್ಯ ವ್ಯಕ್ತಿಗಳಿಗೆ ವಾಹನ ಪಾಸ್‌ನ್ನು ಯಾವ ಆಧಾರದಲ್ಲಿ ನೀಡಲಾಗುತ್ತದೆ; ಪಾಸ್ ಪಡೆಯುವ ವ್ಯಕ್ತಿಯನ್ನು ಗಣ್ಯ ವ್ಯಕ್ತಿ ಎಂಬುದಾಗಿ ಶಿಫಾರಸ್ಸು ಮಾಡುವವರು ಯಾರು; ಒಬ್ಬ ವ್ಯಕ್ತಿಯನ್ನು ಗಣ್ಯ ವ್ಯಕ್ತಿ ಎಂದು ಪರಿಗಣಿಸಬೇಕಾದಲ್ಲಿ ಆ ವ್ಯಕ್ತಿಗೆ ಇರಬೇಕಾದ ಅರ್ಹತೆಗಳೇನು;

(ಉ) ಸಿ.ಆ.ಸು. ಇಲಾಖೆಯ ಕಾರ್ಯಕಾರಿ ಕಛೇರಿಯಲ್ಲಿ ವಾಹನ ಪಾಸುಗಳ ವಿತರಣೆಯಲ್ಲಿ ಅಕ್ರಮವೆಸಗಿರುವ ಕುರಿತು ತನಿಖೆ ನಡೆಸಲಾಗಿದೆಯೇ; ಯಾವ ತಪ್ಪಿತಸ್ಥ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳಲಾಗಿದೆ?